
ಎಂದು ತಿಳಿಯದಾದ. ದೇವರ ಕಲ್ಪನೆ ಅಥವಾ ಅಸ್ತಿತ್ವ 'ಇಲ್ಲ' ಎಂದು ಅಂದುಕೊಳ್ಳುವುದೇ ಕಷ್ಟವಾಗಿ ಭಾರವಾಗಿ ಪಾಪದ ಕಲ್ಪನೆ ಮೂರ್ತವಾಗಿ... ಆಗಲೇ ಥ್ಯಾಂಕ್ಸ್ ಥ್ಯಾಂಕ್ಸ್ ಎಂದು ಎರಡೆರಡು ಬಾರಿ ಆಕಡೆಯಿಂದ ಮೆಸೇಜ್ ಬಂದಿತ್ತು. ಅಲ್ಲೆ ತನ್ನ ಮಾತನ್ನು ನಿಲ್ಲಿಸಿದ್ದ.

ಸಂಜೆ ಸುಮಾರು ಆರುಗಂಟೆಯ ಸಮಯ. ಸೀಯೊನ್ ಕೆಲಸ ಬಿಟ್ಟು ಹೊರಟಿದ್ದಳು. ಕೈಯಲ್ಲಿ ಮೂರು ದೊಡ್ಡ ದೊಡ್ಡ ಬ್ಯಾಗುಗಳಿದ್ದವು. ಅದರಲ್ಲಿ ಬೆನ್ನು ನೋವು ಬಂದಾಗ ಸಹಾಯವಾಗುವ ಒಂದು ದಿಂಬು, ದೊಡ್ಡ ದೊಡ್ಡ ಮಣಿಗಳ ಬೆನ್ನ ಹಿಂದೆ ಇಟ್ಟುಕೊಳ್ಳುವ ಎಕ್ಯುಪಂಚರ್‌ನ ಹಾಸು. ಮಂಜಿನಲ್ಲಿ ಆಗುವ ಹವಾಮಾನದ ಸಮಯದಲ್ಲಿ ಹೊದ್ದುಕೊಂಡು ಕೆಲಸಮಾಡಲಿಕ್ಕೆ ಬೇಕಾದ ಬೆಚ್ಚನೆಯ ಹೊದಿಕೆ ಅಥವಾ ಗಾದಿ, ದಿನವೂ ಚಹ ಕುಡಿಯುವ ಕಪ್‌ಗಳೆಲ್ಲಾ ಇದ್ದವು. ಹೆರಿಗೆ ಮುಗಿಸಿ ಆಸ್ಪತ್ರೆಯಿಂದ ಮನೆಗೆ ಹೊರಟವಳಂತೆ ಕಂಡಳು. ಪಕ್ಕಕ್ಕೆ ಕುಳಿತವರ್‍ಯಾರೂ ಏಳುವುದಾಗಲಿ, ಸೀಯೊನಳಿಗೆ ಶುಭ ಹಾರೈಸುವುದಾಗಲಿ ಮಾಡಲಿಲ್ಲ. ಎಲ್ಲರೂ ತಮ್ಮ ತಮ್ಮ ಕೆಲಸ ಮಾಡುತ್ತ ಒಂದು ಸಾಮಾನ್ಯ ದಿನದ ಹಾಗೆ ಇದ್ದರು. ಇದು ಯಾವ ಸೀಮೆಯ ಪದ್ಧತಿಯಪ್ಪಾ... ಎಂದು ಗುರುಪಾದನಿಗೆ ಸಿಟ್ಟು ಬಂತು. ಬೆಂಗಳೂರಿನ ಹಳೆಯ ಕಂಪೆನಿಗಳಲ್ಲಿ ಒಂದು ವ್ಯಕ್ತಿ ತನ್ನ ಕಂಪೆನಿಯ ಅವಧಿಯಲ್ಲಿ ಕೆಲಸಕ್ಕೆ ಸರಿಯಾಗಿ ಬರದೇ, ಕೆಲಸ ಸರಿಯಾಗಿ ಮಾಡದೇ, ಎಲ್ಲರೊಂದಿಗೂ ಜಗಳವಾಡಿ ಕೆಲಸ ಬಿಟ್ಟರೂ ಕೊನೆಯ ದಿನ ಮಾತ್ರ ಅವನಿಗೆ ಮಧ್ಯಾಹ್ನ ಎಲ್ಲರೊಂದಿಗೆ ಊಟ, ಆತನ ವೀರಗಾಥೆಯ ವರ್ಣನೆ, ಇಲ್ಲಿಯ ಬಾಗಿಲು ಯಾವತ್ತೂ ತೆರೆದಿರುತ್ತದೆ ಎಂದು ಹೇಳುವುದು ಮತ್ತು ಏನಿಲ್ಲವೆಂದರೂ ಸುಮಾರು ಮೂರು ನಾಲ್ಕು ಸಾವಿರದ ಒಂದು ಉಡುಗೊರೆ ಕೊಟ್ಟು ಗೇಟಿನವರೆಗೂ ಬಿಟ್ಟು ಬರುವುದನ್ನು ಗುರುಪಾದ ನೆನೆದ. ಸೀಯೊನಳ ಜೊತೆಗೆ ನಾಲ್ಕು ಹೆಜ್ಜೆ ಹಾಕಿದ. ನಿನ್ನ ಕೈಯಲ್ಲಿರುವ ಬ್ಯಾಗನ್ನು ನಾನು ಹಿಡಿದುಕೊಳ್ಳಲಾ ಎಂದು ಕೇಳಿದ. ಬೇಡಪ್ಪಾ ಬೇಡಪ್ಪಾ ಇದರಲ್ಲೇನಿದೆ ಇದರಲ್ಲೇನಿದೆ ಎನ್ನುತ್ತಾ ಮುಂದೆ ನಡೆದಿದ್ದಳು.



ಮಿತ್ರ ಹೇಳುತ್ತಿದ್ದ, 'ಅಕ್ಕ ಮುಟ್ಟಾದ ನಂತರ ಸೋಲುತ್ತಾ ಹೋದಳು. ನಾನು ಗೆಲ್ಲುತ್ತಾ ಹೋದೆ' ಎಂಬುದು ಮತ್ತೆ ಮತ್ತೆ ನೆನಪಾಯಿತು. ಗುರುಪಾದ ಚಿಕ್ಕವನಿರುವಾಗ ಪ್ರತೀ ಬುಧವಾರ ಕೇಬಲ್‌ನಲ್ಲಿ ಚಲನಚಿತ್ರ ಹಾಕುತ್ತಿದ್ದರು. ಮನೆಯಲ್ಲಿ ಟೀವಿ ಇಲ್ಲದೇ ಇದ್ದಿದ್ದರಿಂದ ರಾತ್ರಿ ಪಕ್ಕದ ನಾಣಪ್ಪ ಹೆಗಡೆಯವರ ಮನೆಗೆ ಹೋಗಿ ನೋಡಬೇಕಿತ್ತು. ಯಾವ ಚಿತ್ರ ಅನ್ನುವುದು ಈಗ ಸರಿಯಾಗಿ ನೆನಪಿಲ್ಲದಿದ್ದರೂ ಆ ಕಥೆಯಲ್ಲಿ ಪಾತ್ರ ಮಾಡಿದ್ದು ಉಮಾಶ್ರೀ ಎನ್ನುವುದನ್ನು ಗುರುಪಾದ ಮರೆತಿಲ್ಲ. ಆ ಪಾತ್ರ... ಅವಳು ಎಷ್ಟು ವರುಷವಾದರೂ ಬಸಿರಾಗುವುದಿಲ್ಲ. ಮನೆಯವರು, ಬೀದಿಯವರು ಬಂಜೆ ಬಂಜೆ ಎಂದು ಜರಿಯುತ್ತಾರೆ. ಒಂದು ದಿನ ಆ ದೇವರ ದಯೆಯಿಂದ ಬಸಿರಾಗುತ್ತಾಳೆ. ಆಗ ನೋಡಬೇಕು ಅವಳ ಖುಷಿಯನ್ನು... ಅವಳ ಏರು ಧ್ವನಿಯನ್ನು... ಅವಳನ್ನು ಹೀಯಾಳಿಸಿದ ಎಲ್ಲರ ಮನೆಯ ಬಾಗಿಲಿಗೆ ಹೋಗಿ